ROTARY INTERNATIONAL



THE MAGIC OF ROTARY

# ROTARY CLUB CHANNARAYAPATTANA VISION
## ZONE 9A RI 3182 – 2024 - 25

**Miditha** Sept - 24



Distributed Speaker, note books and study materials to GHS Obalapura






# ಇಂಟೆರಾಕ್ಟ್ ಕ್ಲಬ್ ಉದ್ಘಾಟನೆ

**ಚನ್ನರಾಯಪಟ್ಟಣ:** ತಾಲೂಕು ರೋಟರಿ ಕ್ಲಬ್ ವತಿಯಿಂದ ಬರಗೂರಿನ ಕುವೆಂಪು ಇಂಟರ್ ನ್ಯಾಷನಲ್ ಶಾಲೆಯಲ್ಲಿ ಎರಡನೇ ಇಂಟೆರಾಕ್ಟ್ ಕ್ಲಬ್‌ನ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಶಾಲೆಯ ವಿದ್ಯಾರ್ಥಿನಿ ಪ್ರಿಯಾಂಕಾ ಅಧ್ಯಕ್ಷರಾಗಿ ಹಾಗೂ ಗಗನ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಪದಗ್ರಹಣ ಅಧಿಕಾರಿಯಾಗಿದ್ದ ಪದ್ಮನಾಬ್ ಶಾಲೆಗಳಲ್ಲಿ ತೆರೆಯುವ ಕ್ಲಬ್‌ನ ಮಹತ್ವ ಕುರಿತು ತಿಳಿಸಿದರು.

ತಾಲೂಕು ಅಧ್ಯಕ್ಷ ಬಿ.ವಿ.ವಿಜಯ್ ಕ್ಲಬ್ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಮುಖ್ಯೋಪಾಧ್ಯಾಯರಾದ ಭೂಮಿಕ, ಕಾರ್ಯದರ್ಶಿ ಕೋಕಿಲ, ಕ್ಲಬ್‌ನ ಕಾರ್ಯದರ್ಶಿ ಡಾ.ಕುಮುದ, ಶಿವ ನಂಜೇಗೌಡ, ಬಿ.ಪಿ.ಜಯ ರಾಘವೇಂದ್ರ, ಹರೀಶ್, ಜ್ಯೋತಿ ಶ್ರೀನಿವಾಸ್, ವೆಂಕಟೇಶ್, ರಘುನಂದನ್ ಇದ್ದರು.




An Interact Club was installed at Kuvempu High school Bargur, with Past AG Rtn Padmanab H N serving as the Installing Officer. This initiative aims to foster leadership and community service among the students.






A blood donation drive was successfully organized at Naukarara Bhavana, Gandhi Circle, and Manjanahalli in Channarayapatna. The event witnessed an overwhelming response, highlighting the community's commitment to saving lives.





A blood donation camp and baby shower function were organized at PHC Bagevalu, attended by the DHO and RCH officer, highlighting community health initiatives. These events encourage blood donation and celebrate new arrivals.





ಗೌರವ ತಂದುಕೊಟ್ಟಿದ್ದಾರೆ ಎಂದರು.

## ಸ್ವಚ್ಛತೆಯಿಂದ ಆರೋಗ್ಯ ರಕ್ಷಣೆ

ಚನ್ನರಾಯಪಟ್ಟಣ: ತಾಲೂಕಿನ ಶ್ರವಣಬೆಳಗೊಳದ ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ Importance of handwash and Mobile addiction ಈ ವಿಷಯದ ಬಗ್ಗೆ ಚನ್ನರಾಯಪಟ್ಟಣದ ಖ್ಯಾತ ಮಕ್ಕಳ ವೈದ್ಯರಾದ ಡಾ. ವಿಜಯ್ ಕುಮಾರ್ ಅವರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಜೊತೆ ಸಂವಾದವನ್ನು ನಡೆಸಿದ ಡಾಕ್ಟರ್ ವಿಜಯಕುಮಾರ್ ರವರು ಮಕ್ಕಳು ಸ್ವಚ್ಛತೆಯತ್ತ ಇದ್ದರೆ ಹೇಗೆ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬ ಸಲಹೆಯನ್ನು ನೀಡಿದರು. ಮತ್ತು ಮಕ್ಕಳುಗಳು ಮೊಬೈಲ್ ಅಡಿಕ್ಷನಿಂಗ್ ನಿಂದ ಅನುಭವಿಸುತ್ತಿರುವ ಕಾಯಿಲೆಗಳು ತೊಂದರೆಗಳ ಬಗ್ಗೆ ಸಲಹೆಗಳನ್ನು ನೀಡಿದರು. ಮಕ್ಕಳು ತಾಯಿ ತಂದೆ ಗುರುವನ್ನು ಅವಲಂಬಿಸಿದರೆ ಉತ್ತಮ ವ್ಯಕ್ತಿತ್ವವನ್ನು ಹೊಂದುತ್ತಾನೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಲೋಕೇಶ್. ಚನ್ನರಾಯಪಟ್ಟಣ ರೋಟರಿ ಕ್ಲಬ್ ನ ಅಧ್ಯಕ್ಷರಾದ ಬಿ. ವಿ. ವಿಜಯ್ ರವರು ಮಕ್ಕಳನ್ನು ಕುರಿತು ಪೋಸ್ಕೋ ಕಾಯ್ದೆ ಬಗ್ಗೆ ಮಾಹಿತಿಯನ್ನು ನೀಡಿದರು.

ಕಾರ್ಯದರ್ಶಿಯಾದ ಜಡಿ ಕುಮುದ. ಸದಸ್ಯರಗಳಾದ ಶಿವನಂಜೇಗೌಡ. ರೂಪ ರವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಡಾಕ್ಟರ್ ವಿಜಯಕುಮಾರ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

Dr. Vijay Kumar, a Pediatrician, gave an insightful speech to the students of Shravanabelagola Government College about the dangers of mobile addiction and the crucial importance of regular hand washing. His talk emphasized the need for balanced digital habits and maintaining good hygiene for overall health.






## ಶಿಕ್ಷಕರಿಗೆ ನೇಷನ್ ಬಿಲ್ಡರ್ ಪುರಸ್ಕಾರ

**ವಿಕ ಸುದ್ದಿಲೋಕ** ಚನ್ನರಾಯಪಟ್ಟಣ
ಸಮಾಜದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಪ್ರತಿಯೊಬ್ಬರ ಯಶಸ್ಸಿನ ಹಿಂದೆ ಗುರುವಿನ ಆಶ್ರಯ ಇರುತ್ತದೆ ಎಂದು ಹಾಸನ ಟ್ರೈಮ್ಸ್ ಕಾಲೇಜಿನ ಶಿಕ್ಷಕ ನಂದಕಿಶೋರ್ ತಿಳಿಸಿದರು.

ಚನ್ನರಾಯಪಟ್ಟಣ ರೋಟರಿ ಕ್ಲಬ್ ವಿಷನ್ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ನೇಷನ್ ಬಿಲ್ಡರ್ ಪುರಸ್ಕಾರ ನೀಡಿ ಮಾತನಾಡಿದರು.

ವ್ಯಕ್ತಿಯೊಬ್ಬ ಉತ್ತಮ ನಾಗರಿಕನಾಗಲು ಶಿಕ್ಷಕರ ಸಹಕಾರವಿದೆ. ಪ್ರತಿಯೊಬ್ಬ ಶಿಕ್ಷಕರೂ ಮಕ್ಕಳಿಗೆ ಮಾದರಿಯಾಗಿರಬೇಕು. ಮಕ್ಕಳ ಮುಂದೆ ಶಿಕ್ಷಕರನ್ನು ಯಾರೂ ಚಿಕ್ಕವರಾಗಿ ನೋಡ ಬಾರದು," ಎಂದು ಕಿವಿಮಾತು ಹೇಳಿದರು.

ಸರಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕಿ ಡಾ.ಪೂರ್ಣಿಮಾ, ನುಗ್ಗೇಹಳ್ಳಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಟಿ.ಆರ್.ಸ್ವಾಮಿ, ಮೇಗಲಕೇರಿ ಸರಕಾರಿ ಪ್ರೌಢಶಾಲೆ ಸಹಶಿಕ್ಷಕಿ ಎಚ್.ಎಸ್. ಚಂದನ ಹಾಗೂ ಕೊತ್ತನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಕೆ.ಶೋಭಾ ಅವರಿಗೆ ನೇಷನ್ ಬಿಲ್ಡರ್ ಪುರಸ್ಕಾರ ನೀಡಲಾಯಿತು.

ಬಿಆರ್‌ಸಿ ಕೆ.ಎನ್.ಅನಿಲ್ ಕಾರ್ಯಕ್ರಮ ಆಯೋಜಿಸಿದ್ದು ರೋಟರಿಕ್ಲಬ್ ಅಧ್ಯಕ್ಷ ಬಿ.ವಿ.ವಿಜಯ್ ಅಧ್ಯಕ್ಷತೆವಹಿಸಿದ್ದರು. ಕಾರ್ಯದರ್ಶಿ ಡಾ. ಕುಮುದಾ, ಎ.ಸಿ.ಜಯರಾಘವೇಂದ್ರ ಮತ್ತಿತರರು ಹಾಜರಿದ್ದರು.

ಚನ್ನರಾಯಪಟ್ಟಣ ರೋಟರಿ ಕ್ಲಬ್ ವತಿಯಿಂದ ಶಿಕ್ಷಕ ದಿನಾಚರಣೆ ನಿಮಿತ್ತ ಶಿಕ್ಷಕರಿಗೆ ನೇಷನ್ ಬಿಲ್ಡರ್ ಪುರಸ್ಕಾರ ಪ್ರದಾನ ಮಾಡಲಾಯಿತು.



## ರಕ್ತದಾನ ಶಿಬಿರ

**ಚನ್ನರಾಯಪಟ್ಟಣ:** ತಾಲೂಕಿನ ಉದಯಪುರದ ಪ್ರಥಮ ದರ್ಜೆ ಪದವಿ ಕಾಲೇಜಿನಲ್ಲಿ ರೋಟರಿ ಕ್ಲಬ್ ವಿಷನ್ ಮತ್ತು ಸ್ವಯಂ ಪ್ರೇರಿತ ರಕ್ತ ನಿಧಿ ಮತ್ತು ಉದಯಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಚಿತವಾಗಿ ಕಣ್ಣಿನ ತಪಾಸಣೆ, ದಂತ ತಪಾಸಣೆ ಮತ್ತು ಮಧುಮೇಹ ಮತ್ತು ಬಿ.ಪಿ.ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಏರ್ಪಡಿಸಲಾಯಿತು. ಶಿಬಿರದಲ್ಲಿ ಸುಮಾರು 25 ವಿದ್ಯಾರ್ಥಿಗಳು ರಕ್ತದಾನವನ್ನು ಮಾಡಿರುತ್ತಾರೆ. ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಸ್ವಯಂ ಪ್ರೇರಿತ ಪ್ರತಿನಿಧಿಯ ಭರತ್‌ಕುಮಾರ್‌ರವರು ವಿದ್ಯಾರ್ಥಿಗಳಿಗೆ ರಕ್ತದಾನ ಮಾಡುವುದರಿಂದ ನಮ್ಮ ದೇಹದಲ್ಲಿರುವ ಒತ್ತಡವು ಕಡಿಮೆಯಾಗುತ್ತದೆ. ಮತ್ತು ಕೆಲವರು ರಕ್ತದಾನವನ್ನು ಮಾಡಿದರೆ ಏನೋ ಕಳೆದುಕೊಳ್ಳುವುದಾಗಿ ಯೋಚನೆ ಮಾಡುತ್ತಾರೆ. ಆದರೆ ನಾವು ನೀಡಿದ ರಕ್ತವು 48 ಗಂಟೆಯಲ್ಲಿ ಪುನಹ ನಮ್ಮ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಒಬ್ಬರು ರಕ್ತ ನೀಡುವುದರಿಂದ 25 ಜನರ ಪ್ರಾಣವನ್ನು ಉಳಿಸಿದಂತಾಗುತ್ತದೆ ಎಂದು ತಿಳಿಸಿರುತ್ತಾರೆ. ಚನ್ನರಾಯಪಟ್ಟಣ ರೋಟರಿ ಕ್ಲಬ್‌ನ ಅಧ್ಯಕ್ಷರಾದ ಬಿ.ವಿ. ವಿಜಯ್, ಕಾರ್ಯದರ್ಶಿ ಕುಮುದ ರಂಜಿತ್,ಖಜಾಂಚಿಗಳಾದ ಕೆ.ಕೆ. ನಟರಾಜ್, ಕಾಲೇಜಿನ ಪ್ರಾಂಶುಪಾಲರಾದ ಕುಮಾರ್, ಶಿಕ್ಷಕರಾದ ನವೀನ್, ಶಿವನಂಜೇಗೌಡ ಭಾಗವಹಿಸಿದ್ದರು. ಎರಡು ಪ್ರಥಮ ಚಿಕಿತ್ಸೆ ಸಲಕರಣೆಯನ್ನು ಕಾಲೇಜಿಗೆ ನೀಡಲಾಯಿತು.

The Nation Builder Awards were facilitated to honor outstanding teachers in Channarayapatna as part of Teachers' Day celebrations. This event recognized the significant contributions of educators in shaping the future of students and the community.



A blood donation camp was organized at the Government First Grade College in Udayapura, and first aid kits were donated to the college. These initiatives aim to promote health and safety within the campus community.

# Birthday & Anniversaries

## Birthday

| |
|---|
| Annet. Navya Shetty |
| John. Chirag C. Keshava |
| John Gokul C.M. |
| John  Virat |
| John. Divith |
| Ann. Hemalatha |
| Rtn. Prakash Baral |
| John. Rejathesh Tharun S |
| Rtn.Harish B.P |
| Annet.Avyaan (Nataraj) |

## Anniversaries

| |
|---|
| Rtn. Harish B.P and Dhakshahini |




## Editorial Board



**Rtn Vijay B V**
**President**



**Rtn Dr Kumuda S S**
**Secretary**



**Rtn Nataraj K K**
**Treasurer**



**Rtn Mamatha H R**
**Editor**